<u>ದಿನಾಂಕಃ 25-02-2020 ರಂದು ಪ್ರಮಾಣ ವಚನ ಭೋದಿಸಲಾಯಿತುಃ</u>

**<u>ಪಾಟೀ ಸವಾಲು ಶ್ರೀ ಎ.ವಿ ವಕೀಲರಿಂದ ಃ</u>**

ನಾನು ವ್ಯವಸಾಯಗಾರನಾಗಿದ್ದೇನೆ. ನಾನು ಬಾಳಿಗಾನಹಳ್ಳಿ ಗ್ರಾಮ ಪಂಚಾಯ್ತಿಯ ಕಂಪ್ಯೂಟರ್ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ವ್ಯವಸಾಯಗಾರನಾಗಿ ಸಹ ಕೆಲಸ ಮಾಡುತ್ತಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. 2009ನೇ ಸಾಲಿನಿಂದ ಮೇಲೆ ಹೇಳಿದಂತೆ ಕಂಪ್ಯೂಟರ್ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಪ್ರತಿ ಬಾನುವಾರದಂದು ಸಂತೆ ನ ಡೆಯುವ ದಿನ ಡಿ.ಎನ್ ದೊಡ್ಡಿ ಗ್ರಾಮದಲ್ಲಿ ಕೋಳಿ ಮತ್ತು ಹಂದಿ ಮಾಂಸದ ಅಂಗಡಿ ನಡೆಸುತ್ತೇನೆ ಎಂದರೆ ಸರಿ. ನಾನು ಡಿಎಡ್ ವ್ಯಾಸಂಗ ಮಾಡಿದ್ದೇನೆ. 1ನೇ ಪ್ರತಿವಾದಿಗೂ ನನಗೂ ಯಾವುದೇ ಸಂಬಂಧವಿಲ್ಲ.

ವಾದಿಯು ಆರೋಗ್ಯದಿಂದ ಇದ್ದು ದಿನನಿತ್ಯ ವ್ಯವಸಾಯದ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಮತ್ತು ಆಕೆ ಗಂಡ ವೆಂಕಟೇಶಪ್ಪರವರು ದೊಡ್ಡ ದೊಮ್ಮರಪಾಳ್ಯ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ ಎಂದರೆ ನಾವೆಲ್ಲಾ ಒಟ್ಟಾಗಿ ವಾಸಿಸುತ್ತಿದ್ದೇವೆ ಎಂದು ಸಾಕ್ಷಿ ನುಡಿದಿರುತ್ತಾರೆ.

ದಾವಾ ಷಡ್ಯೂಲ್ ಸ್ವತ್ತು ವಾದಿಗೆ ಸೇರಿದ ಸ್ವತ್ತು. ದಾವಾ ಸ್ವತ್ತು ಗುರಪ್ಪರವರಿಗೆ ಸೇರಿದ ಸ್ವತ್ತು ಎಂದರೆ ಸಾಕ್ಷಿಯು ಅವರು ರೆವಿನ್ಯೂ ಅಧಿಕಾರಿಗಳ ಮುಂದೆ ವಾದಿ ಹೆಸರಿಗೆ ಖಾತೆ ಬದಲಾವಣೆ ಮಾಡಬಹುದು ಎಂದು ಹೇಳಿಕೆ ನೀಡಿದ್ದಾರೆಂದು ಉತ್ತರಿಸಿದ್ದಾರೆ. ವೆಂಕಟಮ್ಮರವರು ಗುರಪ್ಪರವರ ಪತ್ನಿ ಎಂದರೆ ಸರಿ. ಅವರಿಗೆ ಮಾರಪ್ಪ ಎಂಬ ಮಗ ಇದ್ದರು ಎಂದರೆ ಸರಿ. ಮಾರಪ್ಪರವರಿಗೆ ಬೋಡೆಮ್ಮ ಮತ್ತು ಚಿನ್ನಮ್ಮ ಎಂಬ ಇಬ್ಬರು ಪತ್ನಿಯರು ಎಂದರೆ ಸರಿ, ಚಿನ್ನಮ್ಮ ಮರಣ ಹೊಂದಿದ್ದಾರೆಂದು ಸಾಕ್ಷಿ ನುಡಿದಿರುತ್ತಾರೆ. ಗುರಪ್ಪರವರು 1992ನೇ ಸಾಲಿನಲ್ಲಿ ಮರಣ ಹೊಂದಿದ್ದಾರೆ. ವೆಂಕಟಮ್ಮ ಯಾವ ವರ್ಷ ಮರಣ ಹೊಂದಿದ್ದಾರೆಂದು ಗೊತ್ತಿಲ್ಲ. 1983ನೇ ಸಾಲಿನಲ್ಲಿ ಮರಣ ಹೊಂದಿದ್ದಾರೆ. ಗುರಪ್ಪರವರ ಮರಣಾನಂತರ ವಾದಿ ಹೆಸರಿಗೆ ಖಾತೆ ಬದಲಾವಣೆ ಆಗಿದೆ, ಅವರ

ಜೀವಿತಾವಧಿಯಲ್ಲಿ ಬದಲಾವಣೆ ಆಗಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾರಪ್ಪರವರ 2ನೇ ಪತ್ನಿ ಚಿನ್ನಮ್ಮರವರಿಗೆ ಪೆದ್ದಮ್ಮ, ಯ್ಯ, ಮಾರಪ್ಪ, ಬಾಲಮ್ಮ, ಚಿನ್ನಯ್ಯ ಹಾಗೂ ವೆಂಕಟರಮಣ ಎಂಬ ಮಕ್ಕಳು ಇದ್ದಾರೆ ಎಂದರೆ ಸರಿ. ಮಾರಪ್ಪ ಬಿನ್ ಮಾರಪ್ಪರವರು ದಿಃ 12-07-2007 ರಂದು ಮರಣಹೊಂದಿದ್ದಾರೆ ಎಂದರೆ ಅವರು ಮರಣ ಹೊಂದಿರುವುದು ನಿಜ ನಿಖರವಾದ ದಿನಾಂಕ ಗೊತ್ತಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. 1ನೇ ಪ್ರತಿವಾದಿ ಮಾದೇಶ್‌ರವರು ಮೇಲೆ ಹೇಳಿದ ಮಾರಪ್ಪರವರ ಮಗ ಎಂದರೆ ಸರಿಯಲ್ಲ, ಅವರಿಗೆ ವಿವಾಹವೇ ಆಗಿರಲಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ವಾದಪತ್ರದ ಶೀರ್ಷಿಕೆಯಲ್ಲಿ ನಮೂದಿಸಿರುವ 1ನೇ ಪ್ರತಿವಾದಿ ತಂದೆ ಮೇಲೆ ಹೇಳಿದ ಮಾರಪ್ಪ ಬಿನ್ ಮಾರಪ್ಪರವರೇ ಆಗಿದ್ದಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಪ್ರತಿ ಭಾನುವಾರ ನನ್ನೊಡನೆ ಸಂತೆಯಲ್ಲಿ ಮಾಂಸದ ವ್ಯಾಪಾರ ಮಾಡುತ್ತಾರೆ ಸದರಿ ವ್ಯಾಪಾರದಲ್ಲಿ ನಾವಿಬ್ಬರೂ ಎದುರಾಳಿಗಳು ಎಂದರೆ ಸರಿ. 1ನೇ ಪ್ರತಿವಾದಿಯು ಹುಟ್ಟಿ ಬೆಳೆದಿದ್ದು ದೊಡ್ಡದೊಮ್ಮರ ಪಾಳ್ಯದಲ್ಲಿ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಮಾರಪ್ಪ ಬಿನ್ ಮಾರಪ್ಪರವರ ಮಗನೇ 1ನೇ ಪ್ರತಿವಾದಿಎಂಬ ವಿಚಾರತಿಳಿದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದೊಡ್ಡ ದೊಡ್ಡದೊಮ್ಮರ ಪಾಳ್ಯ ಬೇಚಾರಿಕೆ ಗ್ರಾಮ ಎಂದರೆ ಸರಿ. ಸದರಿ ಗ್ರಾಮಕ್ಕೆ ಸಂಬಂಧಿಸಿ ರೆವಿನ್ಯೂ ಇಲಾಖೆಯಲ್ಲಿ ಗ್ರಾಮ ನಕ್ಷೆ ಇಲ್ಲ ಎಂದರೆ ಸರಿ. ಸರ್ವೆ ನಂ 268 ಮೊದಲಿಗೆ ಸರ್ವೆ ನಂ 89 ಆಗಿತ್ತು ಎಂದರೆ ಸರಿಯಲ್ಲ. ಸರ್ವೆ ನಂ 89 ರಲ್ಲಿ ದೊಡ್ಡ ದೊಮ್ಮರ ಪಾಳ್ಯದ ಜನರು ಮನೆಗಳು ನಿರ್ಮಿಸಿಕೊಂಡಿದ್ದಾರೆ ಎಂದರೆ ಸರಿ. ದಾವಾ ಎ ಷಡ್ಯೂಲ್ ಸ್ವತ್ತಿನ ಪಶ್ಚಿಮಕ್ಕೆ 1ನೇ ಪ್ರತಿವಾದಿಯ ಸ್ವತ್ತು ಮತ್ತು ಗ್ರಾಮ ಠಾಣಾ ಎಂಬುದಾಗಿ ತೋರಿಸಲಾಗಿದೆ. ಸರ್ವೆ ನಂ 268 2ಎಕರೆ ಸ್ವತ್ತು ಬರುತ್ತದೆ ಎಂಬುದನ್ನು ತೋರಿಸಲು ಸರ್ವೆ ಇಲಾಖೆಯಿಂದ ಯಾವುದೇ ಸರ್ವೆ ದಾಖಲೆ ಹಾಜರುಪಡಿಸಿಲ್ಲ ಪಹಣಿ ಪತ್ರಿಕೆ ಹಾಜರುಪಡಿಸಿದ್ದೇನೆ.

ದಾವಾ ಸ್ವತ್ತಿನ ಸಂಬಂಧ ನನ್ನ ತಾಯಿ ಸರ್ವೆ ಮಾಡಿಸಿದ್ದರೋ ಇಲ್ಲವೋ ಗೊತ್ತಿಲ್ಲ. ಸಾಕ್ಷಿ ನುಡಿಯುವ ಮೊದಲು ನನ್ನ ತಾಯಿಯೊಡನೆ ದಾವಾ ಸ್ವತ್ತಿಗೆ ಸಂಬಂಧಿಸಿ ಎಲ್ಲಾ ವಿಚಾರ ಚರ್ಚಿಸಿದ್ದೇನೆ. ದಾವಾ ಸ್ವತ್ತು ಖುಷ್ಕಿ ಜಮೀನಾಗಿರುತ್ತದೆ. ದಾವಾ ಷಡ್ಯೂಲ್‌ನಲ್ಲಿ ತಿಳಿಸಿರುವ ಚಕ್ಕುಬಂದಿ ಒಳಗೆ ಒಟ್ಟು 3 ಎಕರೆ ವಿಸ್ತೀರ್ಣದ ಸ್ವತ್ತು ಬರುತ್ತದೆ ನಾವು ಗ್ರಾಮ ಠಾಣಾ ಸ್ವತ್ತನ್ನು ಒತ್ತುವರಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಅಳತೆ ಮಾಡಿದಲ್ಲಿ ನಿಜಾಂಶ ತಿಳಿಯುತ್ತದೆ ಎಂಬ ಕಾರಣಕ್ಕೆ ಅಳತ ಮಾಡಲು ನಾವು ಬಿಡುತ್ತಿಲ್ಲ ಎಂದರೆ ಸರಿಯಲ್ಲ.

ದಿಃ 19-11-1991 ರಂದು ತಹಸೀಲ್ದಾರ್ ಮತ್ತು ಬಿಡಿಒರವರು 2ನೇ ಪ್ರತಿವಾದಿಗೆ ಹಕ್ಕುಪತ್ರ ನೀಡಿದ್ದಾರೆ ಎಂದರೆ ನೀಡಿರಬಹುದು ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ಹಕ್ಕುಪತ್ರದಲ್ಲಿ ನಮೂದಿಸಲಾದ ಚಕ್ಕುಬಂದಿ ಪೂರ್ವಕ್ಕೆ ವೆಂಕಟೇಶಪ್ಪರವರ ಸ್ವತ್ತು ಪಶ್ಚಿಮಕ್ಕೆ ದಾರಿ, ಉತ್ತರಕ್ಕೆ ಪಾಪಮ್ಮರವರ ಮನೆ ದಕ್ಷಿಣಕ್ಕೆ ಚಿನ್ನಮ್ಮರವರ ಮನೆ ಎಂದರೆ ತಪ್ಪು ಚಕ್ಕುಬಂದಿ ನಮೂದಿಸಲಾಗಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. 2ನೇ ಪ್ರತಿವಾದಿಯು 1ನೇ ಪ್ರತಿವಾದಿಗೆ ದಿಃ 12-10-2012 ರಂದು ಮೇಲೆ ತಿಳಿಸಿದಂತೆ ಹಕ್ಕು ಪತ್ರದ ಮೂಲಕ ಬಂದ ಸ್ವತ್ತನ್ನು ಮಾರಾಟ ಮಾಡಿದ್ದು ಸದರಿ ಸ್ವತ್ತನ್ನು ಬಿ ಷಡ್ಯೂಲ್ ಸ್ವತ್ತಾಗಿ ತೋರಿಸಿ ಅದನ್ನು ಕಬಳಿಸಲು ಈ ದಾವೆ ತಂದಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ಸರ್ವೆ ನಂ 268 ರಲ್ಲಿ ಯಾವುದೇ ಸ್ವತ್ತನ್ನು ಒತ್ತುವರಿ ಮಾಡಿಲ್ಲ ಹಕ್ಕು ಪತ್ರದಲ್ಲಿ ತಿಳಿಸಲಾದ ಷಡ್ಯೂಲ್‌ನಲ್ಲಿ ಮಾತ್ರ ಮಾಡಿದ್ದಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಖರೀದಿಸಿರುವ ಸ್ವತ್ತಿನ ದಕ್ಷಿಣದಿಂದ ಉತ್ತರಕ್ಕೆ ಒಂದೇ ಸಮನಾಗಿರುವ ಮೂರು ಮನೆಗಳು ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಖರೀದಿಸಿರುವ ಸ್ವತ್ತಿನಲ್ಲಿ ಷಡ್ ನಿರ್ಮಿಸಿಕೊಂಡು ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ಅವರ ಸ್ವತ್ತನ್ನು

ಕಬಳಿಸುವ ಉದ್ದೇಶದಿಂದ ಮತ್ತು ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ದಾವಾ ಎ ಮತ್ತು ಬಿ ಷೆಡ್ಯೂಲ್ ಸ್ವತ್ತಗಳ ಸಂಬಂಧ ಸರ್ವೆ ಇಲಾಖೆಯಿಂದ ನೀಡಿರುವ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಮ್ಮ ಬಳಿ ಇರುವ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ದಾವಾ ಎ ಮತ್ತು ಬಿ ಷೆಡ್ಯೂಲ್ ಸ್ವತ್ತುಗಳು ಎಲ್ಲಿ ಬರುತ್ತವೆ ಎಂದು ನಿಖರವಾಗಿ ನನಗೆ ಗೊತ್ತಿಲ್ಲ ಆದರೂ ಸಹ ಪ್ರತಿವಾದಿಗಳಿಗೆ ತೊಂದರೆ ನೀಡಲು ಈ ದಾವೆ ತಂದಿದ್ದೇನೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿರುವ ಕಂದಾಯ ರಸೀದಿಗಳು ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ವಿಸ್ತೀರ್ಣ ಮತ್ತು ಚಕ್ಕುಬಂದಿಯ ನೈಜ ಸ್ಥಿತಿ ತಿಳಿಯುತ್ತದೆ ಎಂಬ ಕಾರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ 35 ರ ವಿರುದ್ದ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ. ನಿಪಿ 35 ರ ವಿವರಗಳ ಪ್ರಕಾರ ಸದರಿ ದಾಖಲೆಯಲ್ಲಿ ತಿಳಿಸಿರುವ ಸ್ವತ್ತುಗಳಲ್ಲಿ 1ನೇ ಪ್ರತಿವಾದಿ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ನಿಪಿ 35 ರಲ್ಲಿ ನಮೂದಿಸಿರುವ ಸ್ವತ್ತು ಸರ್ವೆ ನಂ 235 ರಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 37 ರಲ್ಲಿ ಬರೆದಿರುವ ವಿವರಗಳ ಬಗ್ಗೆ ನನಗೆ ಮಾಹಿತಿ ಇದೆ. ಸರ್ವೆ ನಂ 268 ರಲ್ಲಿ ನೀರಿನ ಸರಬರಾಜು ಕೇಂದ್ರ ನಿರ್ಮಿಸಿಲ್ಲ ಅದು ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ದೊಡ್ಡ ದೊಮ್ಮರಪಾಳ್ಯ ಗ್ರಾಮ ಡಿ.ಎನ್ ದೊಡ್ಡಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ. ನಿಪಿ 38 ದಾವಾ ಸ್ವತ್ತುಗಳಿಗೆ ಸಂಬಂಧಿಸಿ ದಾಖಲೆಗಳಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆ ಖಾತಾ ನಂ.35 ಕ್ಕೆ ಸಂಬಂಧಿಸಿದ ದಾಖಲೆ ಆದರಲ್ಲಿ ತಿದ್ದುಪಡಿ ಮಾಡಲಾಗಿದೆ ಎಂದು ಸಾಕ್ಷಿ ನುಡಿದಿರುತ್ತಾರೆ.

ದಾವಾ ಬಿ ಷಡ್ಯೂಲ್ ಸ್ವತ್ತನ್ನು ಪ್ರತಿವಾದಿ 2013 ನೇ ಸಾಲಿನಲ್ಲಿ ಒತ್ತುವರಿ ಮಾಡಿದ್ದಾರೆ. 1ನೇ ಪ್ರತಿವಾದಿ 2012ನೇ ಸಾಲಿನಲ್ಲಿ ಸ್ವತ್ತನ್ನು ಖರೀದಿಸಿದ ಕಾರಣ ಅವರ ಮೇಲಿನ ದ್ವೇಷದಿಂದ ನಾನು ಈ ದಾವೆಯನ್ನು ತಂದಿದ್ದೇನೆ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ತಿಳಿಸಿರುವ ವಿವರಗಳನ್ನು ಸಾಕ್ಷಿ ವಿಚಾರಣಾ ಪ್ರಮಾಣಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು 1ನೇ ಪ್ರತಿವಾದಿ ನಡುವೆ ದಾಯಾದಿ ಕಲಹವಿರುವ ಕಾರಣ ಅವರು ಖಾತಾ ನಂ35 ರಲ್ಲಿ ಷಡ್ ನಿರ್ಮಿಸುವ ಸಮಯ ಅವರಿಗೆ ತೊಂದರೆ ಆಗಲೀ ಎಂದು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಬಗ್ಗೆ ವಾಸ್ತವಾಂಶತಿಳಿಯದಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಆಗಲೀ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)**

ಓ.ಹೇ ಕೇ ಸರಿ ಇದೆ.

**(ಅನುಪಮ .ಡಿ)**
ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಲೂರು.